## ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜಮಖಂಡಿ

ಸಿ.ಸಿ. ನಂ–682/2020

Cw–4 Pw–5

| | |
|---|---|
| ಹೆಸರು | ಮಲ್ಲಪ್ಪಾ ತಂದೆ ಲಕ್ಕಪ್ಪಾ ದೊಡ್ಡಟ್ಟಿ |
| ವಯಸ್ಸು | 38 |
| ಉದ್ಯೋಗ | ಎಚ್ ಸಿ ತೇರದಾಳ ಪಿ ಎಸ್ |
| ವಾಸಸ್ಥಳ | ತೇರದಾಳ |

ದಿನಾಂಕಃ 25–11–2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಎಪಿಪಿ ರವರಿಂದ–**

ದಿನಾಂಕಃ 2013 ರಿಂದ 2020 ರವರೆಗೆ ನಾನು ಸಾವಳಗಿ ಠಾಣೆಯಲ್ಲಿ ಸಿ ಪಿ ಸಿ ಅಂತಾ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 02–04–2020 ರಂದು ಸಂಜೆ 07–00 ಸುಮಾರಿಗೆ ಗೊಠೆ ಗ್ರಾಮದಲ್ಲಿ ನಾನು ಚಾಸಾ 1 , 5, ಮತ್ತು ಚಾಸಾ 6 ರವರೊಂದಿಗೆ ಗಸ್ತು ಮಾಡುತ್ತಿರುವಾಗ ಗೊಠೆ ಗ್ರಾಮದ ಗ್ರಾಮ ಪಂಚಾಯತಿ ಹತ್ತಿರ ಕುಮಟೆ ರಸ್ತೆಯ ಮೇಲೆ ಒಬ್ಬ ವಕ್ತಿ 2 ಲೀಟರ್ ನ 2 ಬಾಟಲಿಗಳಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಮಾರಾಟ ಮಾಡುತ್ತಿದ್ದ ಬಗ್ಗೆ ಮಾಹಿತಿ ಬಂದಿದ್ದು ಕೂಡಲೇ ಚಾಸಾ–1 ರವರ ಅದೇಶದ ಮೇರೆಗೆ ನಾನು ಇಬ್ಬರೂ ಪಂಚರನ್ನು ಬರಮಾಡಿಕೊಂಡು ಬಂದಿದ್ದು ನಾನು ಚಾಸಾ– 2 ಮತ್ತು ಚಾಸಾ 3 ರವರನ್ನು ಹಾಜರಪಡಸಿದ್ದು ಅವರಿಗೆ ಮಾಹಿತಿಯನ್ನು ತಿಳಿಸಿ ಅವರು ಪಂಚರಾಗಿ ಸಹಕರಿಸಲು ಒಪ್ಪಿಕೊಂಡಿ ಮೇರೆಗೆ ಮಾಹಿತಿ ಬಂದ ಸ್ಥಳಕ್ಕೆ ಹೋಗಿ ಸ್ವಲ್ಪ ದೂರದಲ್ಲಿ ನಿಂತು ಮರೆಯಲ್ಲಿ ನೋಡಲಾಗಿ ಕುಮಟೆ ರಸ್ತೆಯ ಮೇಲೆ ಒಬ್ಬ ವ್ಯಕ್ತಿ 2 ಪ್ಲಾಸ್ಟಿಕ ಬಾಟಲಿಗಳಲ್ಲಿ ಕಳ್ಳ ಬಟ್ಟಿ ಸರಾಯಿಯನ್ನು ಹಿಡಿದುಕೊಂಡು ನಿಂತಿದನ್ನು ನೋಡಿ ಅವನ್ನು ಅಕ್ರಮವಾಗಿ ಸರಾಯಿ ಮಾರಾಟ ಮಾಡುತ್ತಿದ್ದ ಬಗ್ಗೆ ಖಚಿತಪಡಿಸಿಕೊಂಡು ಕೂಡಲೇ ಸಿಬ್ಬಂದಿ ಮತ್ತು ಪಂಚರೊಂದಿಗೆ ಆತನನ್ನು ಹಿಡಿಯಲು ಗೇರವ ಮಾಡಲಾಗಿ ಆತನನ್ನು ಹಿಡಿದು ಹೆಸರು ವಿಚಾರಿಸಲಾಗಿ ರವಿ ಭಗವಂತ ಸಾಳುಂಕೆ ಸಾಃ ಗೋಠೆ ಅಂತಾ ತಿಳಿಸಿದನ್ನು ಆತನ ಬಳ್ಳಿ ಇದ್ದ 2 ಬಾಟಲಿಗಳನ್ನು ತೆಗೆದು ನೋಡಲಾಗಿ ಅದರಿಂದ ಗಾಟ ವಾಸನೆ ಬರುತ್ತಿತ್ತು. ನಂತರ ಪಂಚರ ಸಮಕ್ಷಮ ಸದರಿ ಬಾಟಲಿಗಳಿಂದ 1 ಬಾಟಲಿನಲ್ಲಿ 180 ಎಮ್ ಎಲ್ ನ ಶ್ಯಾಂಪಲ ಪಡೆದು ಅದನ್ನು ಒಂದು ಕವರಿನಲ್ಲಿ ಹಾಕಿ ಅದಕ್ಕೆ ದಾರದಿಂದ ಕಟ್ಟಿ ಇಲಾಖಾ ಮುದ್ರೆ ಹಾಕಿ ಅದಕ್ಕೆ ಪಂಚರ ಸಹಿಯುಳ್ಳ ಚೀಟಿ ಅಂಟಿಸಿದೆವು. ನಂತರ ಪಂಚನಾಮೆಯನ್ನು ಪಂಚರ

ಸಮಕ್ಷಮ 07-20 ರಿಂದ 08-20 ವರೆಗೆ ಜರುಗಿಸಿ ಸಹಿಯನ್ನು ಪಡೆದುಕೊಂಡಿರುತ್ತೇವೆ ಸದರಿ ವ್ಯಕ್ತಿಯನ್ನು ರಾತ್ರಿ 07-20 ಗಂಟೆಗೆ ದಸ್ತಗಿರಿ ಮಾಡಿರುತ್ತೇವೆ . ನಂತರ ಆರೋಪಿ ಹಾಗೂ ಮುದ್ದೆಮಾಲನ್ನು ಪಂಚನಾಮೆಯೊಂದಿಗೆ ಠಾಣೆಗೆ ತೆಗೆದುಕೊಂಡು ಬಂದು ಚಾಸಾ-1 ರವರು ಸರ್ಕಾರದ ಪರವಾಗಿ ಪಿರ್ಯಾದಿಯನ್ನು ಸಲ್ಲಿಸಿರುತ್ತಾರೆ .ಈ ಕುರಿತು ನಾನು ಹೇಳಿಕೆಯನ್ನು ನೀಡಿರುತ್ತೇನೆ. ದಾಳಿಯ ದಿನ ನಾವು ದಸ್ತಗಿರಿ ಮಾಡಿದ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ .ಈ ಹಂತದಲ್ಲಿ ಆರೋಪಿ ಗೈರು ಹಾಜರು ಇದ್ದು ಆತನ ಪರ ವಕೀಲರು ಆತನ ಹಾಜರಾತಿ ವಿನಾಯತಿ ಕೋರಿ ಅರ್ಜಿ ಸಲ್ಲಿಸಿದ್ದು ಗುರುತಿಸುವಿಕೆಗೆ ತಕರಾರು ಇಲ್ಲ ಎಂದು ಹೇಳಿದ್ದರಿಂದ ಅರ್ಜಿಯನ್ನು ಪುರಸ್ಕರಿಸಲಾಯಿತು .

ಸಾಕ್ಷಿಯು ಸ್ಯಾಂಪಲ್ ಪಡೆದುಕೊಂಡ ಮುದ್ದೇಮಾಲನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮು-ಮಾ-1 ಎಂದು ಗುರುತಿಸಲಾಗಿದೆ .

**ಪಾಟೀ ಸವಾಲುಃ ಶ್ರೀ. ವಿ ಕೆ ಎಲ್ ಆರೋಪಿ ಪರ ವಕೀಲರಿಂದ-**

ನಾನು ದಿನಾಂಕ 02-04-2020 ರಂದು ಒಬ್ಬನೇ ಗೋಠೆ ಗ್ರಾಮಕ್ಕೆ ಗಸ್ತು ಮಾಡಲು ಹೋಗಿರುತ್ತೇನೆ ಎಂದು ಸುಳ್ಳಾಗಿ ಹೇಳುತ್ತಿದ್ದೇನೆಂದರೆ ಸರಿಯಲ್ಲ . ಚಾಸಾ-2 ಮತ್ತು ಚಾಸಾ-3 ರವರು ಇಬ್ಬರು ಸಹ ಕಾಜಿ ಬಿಳಗಿ ರಹವಾಸಿ ಆಗಿರುತ್ತಾರೆ ಎಂದರೆ ಸರಿ . ನಾನು ಚಾಸಾ-2 ಮತ್ತು 3 ರವರನ್ನು ಫೋನ್ ಕರೆ ಮಾಡಿ ಠಾಣೆಗೆ ಕರೆಸಿರುತ್ತೇನೆ . ನಾನು ನಮ್ಮ ಮೇಲಾಧಿಕಾರಿಗಳ ಸಮಕ್ಷಮ ಯಾವುದೇ ರೀತಿಯ ಹೇಳಿಕೆ ಹೇಳಿರುವದಿಲ್ಲ ಎಂದರೆ ಸರಿಯಲ್ಲ . ದಾಳಿ ಸಮಯದಲ್ಲಿ ಗೋಠೆ ಗ್ರಾಮದ ಬಿಟ್ ಕಾರ್ಯವನ್ನು ನಾನೇ ಮಾಡುತ್ತಿದ್ದೆ . ತಿಂಗಳನಲ್ಲಿ ಒಂದು ಅಥವಾ ಎರಡು ಬಾರಿ ಬಿಟ್ ಕಾರ್ಯವನ್ನು ಮಾಡಲು ಹೋಗುತ್ತೇವೆ . ನನ್ನ ಬಿಟ್ ಕಾರ್ಯದಲ್ಲಿ ಎಲ್ಲ ಕಡೆಗೆ ನೋಡಿ ಯಾರಾದರೂ ಮೇಲೆ ಸಂಶಯ ಬಂದರೆ ನಮ್ಮ ಮೇಲಾಧಿಕಾರಿಗಳಿಗೆ ತಿಳಿಸುತ್ತೇನೆ . ಪಂಚನಾಮೆ ಮಾಡುವ ಪೂರ್ವದಲ್ಲಿ ಗೋಠೆ ಗ್ರಾಮ ಪಂಚಾಯತಿಗೆ ಬೇಟಿ ನೀಡಿ ಅಲ್ಲಿ ಪಂಚರಾಗಿ ಸಹಕರಿಸಲು ಯಾರಿಗೂ ಸಹ ಕೇಳಿಕೊಂಡಿರುವದಿಲ್ಲ . ಈಗ ನಾವು ಬಿಟ್ ಪುಸ್ತಕವನ್ನು ಪ್ರತಿ ಊರಿನಲ್ಲಿ ಇಡುವದಿಲ್ಲ , ಈಗ ಸ್ಮಾರ್ಟ ಬಿಟ್ ಬಂದ ನಂತರ ಪುಸ್ತಕ ಇಡುವದನ್ನು ನಿಲ್ಲಿಸಿರುತ್ತೇವೆ . 2020 ನೇ ಸಾಲಿನಲ್ಲಿ ದೇಶಾದ್ಯಂತ ಕೋವಿಡ ಇತ್ತು ಎಂದರೆ ಸರಿ . ಅದಕಾರಣ ಜನರು ಹೊರಗೆ ಬರುತ್ತಿರಲಿಲ್ಲ ಎಂದರೆ ಸರಿ. ದಿನಾಂಕ 02-04-2020 ರಂದು ಆರೋಪಿ ಗಸ್ತು ಕಾರ್ಯ ಮಾಡುತ್ತಿರುವಾಗ ಗೋಠೆ ಗ್ರಾಮದಲ್ಲಿ ಕಳ್ಳಬಟ್ಟಿ ಸರಾಯಿ ಮಾಡುವ ಕಾಲಕ್ಕೆ ಸಿಕ್ಕಿರುತ್ತಾನೆಂದು ಸುಳ್ಳಾಗಿ ಹೇಳಿತ್ತಿದ್ದೇನೆಂದರೆ ಸರಿಯಲ್ಲ . ಆರೋಪಿ ಮೇಲೆ ಸಂಶಯ ಬಂದು ಆತನಿಗೆ ಠಾಣೆಗೆ ಕರೆಯಿಸಿ ಆತನ ವಿರುದ್ಧ ಖೋಟ್ಟಿ ಪಿರ್ಯಾದಿ ಸಲ್ಲಿಸಿ ಈ ದಿನ ನಮ್ಮ ಮೇಲಾಧಿಕಾರಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

**ಮರು ವಿಚಾರಣೆಃ ಇಲ್ಲಾ**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

sd/-

ಪ್ರಧಾನ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ